ಹೆಚ್ಚಾಗಿರುವುದರಿಂದ ಸರ್ಕಾರದವರು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ ?

Mr. SPEAKER.— It is too general a question.

ಶ್ರೀ ಕಡಿದಾಳ್ ಮಂಜಪ್ಪನವರು — ಪರಿಶೀಲನೆ ಮಾಡುತ್ತೇವೆ.

Road from Pandarahalli to Bennur

Q.—94. G. SIVAPPA (Holalkere).— Will the Government be pleased to ate :—

(*a*) whether the road from Pandarahalli *via* Hullur, Bettadanagenahalli, Bheemasamudra, Bommenahalli, Kaddaligudalu, Sirigere to Bennur was surveyed in Chitaldurg Taluk ;

(*b*) the total length of this road and how many miles have been completed ;

(*c*) whether any grant has been given by them ;

(*d*) whether arrangement will be made to complete the execution of work as early as possible ?

A.—Sri T. CHANNIAH (Minister for Public Health and Local-Self Government).—

(*a*) Detailed surveys have not been conducted.

(*b*) Total length 16½ miles. Length completed six miles.

(*c*) No.

(*d*) The matter will be examined.

ಶ್ರೀ ಜಿ. ಶಿವಪ್ಪನವರು.—ಈ ರಸ್ತೆ ಡಿಸ್ಟ್ರೆಸ್ ಪ್ರದೇಶದಲ್ಲಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯನವರು.—ಬಂದಿಲ್ಲ.

ಶ್ರೀ ಜಿ. ಶಿವಪ್ಪನವರು.—ಈ ರಸ್ತೆ ಯಾವ ಕ್ಲಾಸ್‌ಗೆ ಸೇರಿದ್ದು ?

ಶ್ರೀ ಟಿ. ಚನ್ನಯ್ಯನವರು.—ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಟ್ಟದ್ದು.

ಶ್ರೀ ಜಿ. ಶಿವಪ್ಪನವರು.—ಇದು ಸ್ಕೇರ್ಸಿಟಿ ಪ್ರದೇಶದಲ್ಲಿರುವುದು ಗಮನಕ್ಕೆ ಬಂದಿಲ್ಲವೆಂದು ಹೇಳಲಾಯಿತು. ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಸ್ಕೇರ್ಸಿಟಿ ಇದೆಯೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯನವರು.—ಕೆಲವು ಭಾಗಗಳಲ್ಲಿದೆ. ....

Mr. SPEAKER.— That supplementary is not relevant.

ಶ್ರೀ ಜಿ. ಶಿವಪ್ಪನವರು.—ಹಿಂದೆ ಅಲ್ಲಿ ರಿಲೀಫ್ ಕಾಮುಗಾರಿಗಳನ್ನು ಮಾಡಲಿಲ್ಲ, ಈಗಲಾದರೂ ಮಾಡುತ್ತೀರಾ ?

Sri T. CHANNAIAH.—Yes, that will be examined.

ಶ್ರೀ ಜಿ. ಶಿವಪ್ಪನವರು.—ಈ ರಸ್ತೆ ಹಳ್ಳಿಗಾಡಿನಲ್ಲಿರುವುದರಿಂದ ಬಹಳ ಪ್ರಾಮುಖ್ಯವಾದದೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯನವರು.—ಜಗಳೂರು ಬರ್ಮಸಾಗರ ಈ ಸ್ಥಳಗಳಿಗೆಲ್ಲಾ ಹೋಗುವುದಕ್ಕೆ ಅನುಕೂಲವಾದ ಮುಖ್ಯ ರಸ್ತೆಯನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಮುಲ್ಕಗೋವಿಂದರೆಡ್ಡಿಯವರು (ಚಿತ್ರದುರ್ಗ).—ಆರು ಮೈಲಿ ರಸ್ತೆ ಆಗಿದೆಯೆಂದು ತಿಳಿಸಿದೆ. ಅದನ್ನು ಸರ್ಕಾರದವರೇ ಮಾಡಿಸಿದ್ದಾರೆಯೇ ?

ಶ್ರೀ ಟಿ. ಚನ್ನಯ್ಯನವರು.— ಡಿಸ್ಟ್ರಿಕ್ ಬೋರ್ಡಿನವರು ಮಾಡಿಸಿದ್ದಾರೆ.

ಶ್ರೀ ಮುಲ್ಕಾಗೋವಿಂದರೆಡ್ಡಿಯವರು.—ಅದು ಐ. ವಿ. ಸಿ. ರಸ್ತೆಯಲ್ಲವೆ ?

Sri T. CHANNIAH.—ಅಲ್ಲ. After the promulgation of the new Village Panchayets and District Boards Act, these will be taken up later on.

ಶ್ರೀ ಮುಲ್ಕಗೋವಿಂದರೆಡ್ಡಿಯವರು.—ಈ ರಸ್ತೆ ಬಹಳ ಅಗತ್ಯವಾದುದರಿಂದ ಜಾಗ್ರತೆ ಮಾಡಿಸುತ್ತೀರಾ ?

Mr. SPEAKER.—That is over already. Sri SHIVAPPA has already put that question.

Sri T. CHANNAIYA.—That will be examined.

ಶ್ರೀ ಟಿ. ಹನುಮಯ್ಯನವರು.—ರೋಡ್ ರೀಕ್ಲಾಸಿಫಿಕೇಷನ್ ಸಮಿತಿಯಾಗಿತ್ತೆ ?

ಅಧ್ಯಕ್ಷರು.—ಇನ್ನೂ ರಸ್ತೆಯೇ ಆಗಿಲ್ಲ.

ಶ್ರೀ ಟಿ. ಹನುಮಯ್ಯನವರು.—ಆ ಡಿಸ್ಟ್ರಿಕ್ಟಿಗೆ ರೋಡ್ ರೀಕ್ಲಾಸಿಫಿಕೇಷನ್ ಸಮಿತಿ ಆಗಿತ್ತೆ?

Sri T. CHANNAIYA.—That does not arise out of this question.

ಶ್ರೀ ಟಿ. ಹನುಮಯ್ಯನವರು.—ಅದು ಮೆಟಲ್ ರಸ್ತೆಯೋ ಆಥವಾ ಮಣ್ಣು ರಸ್ತೆಯೋ?

ಶ್ರೀ ಟಿ. ಚನ್ನಯ್ಯನವರು.—ಮಣ್ಣು ರಸ್ತೆ.

Backward Class Scholarships awarded in Chitaldrug Intermediate College.

Q.—251. Sri Mulka GOVINDA REDDY (Chitaldrug).—

Will the Government be pleased to state :—

(*a*) how many backward class general and merit scholarships were awarded to the students of Intermediate College, Chitaldrug (names of students may kindly be given by class and communitywar) ;

(*b*) whether all the scholarships were distributed ;

(*c*) if not, who are all the students that were not given the amount and when it was stopped ;

(*d*) whether any of the students were allowed to draw the amounts after reconsideration if so, who those are ;

(*e*) the reason for not disbursing the amount ?

A.—Sri A. G. RAMACHANDRA RAO (Minister for Law and Education).—

(*a*)

1.	Merit Scholarship.	1	*
2.	General do	Nil	*
3.	Backward do	66	*
4.	Depressed Class Scholarship.	20	*
5.	Special do	1	*
6.	Women's do	1	*

* List of students by class and community war appended below.

(*b*) No. The scholarship amount of some students was not drawn and disbursed since in spite of repeated warnings their attendance continued to be unsatisfactory and as per rule 6 on page 102 of the Mysore University Calendar Vol. II for 1944-45, the disbursement of a scholarship is subject to three conditions (*viz.*), satisfactory progress, conduct and attendance.

(*c*) The scholarship amounts of the students mentioned in the Statement appended below were not drawn and disbursed owing to heavy shortage of attendance.

(*d*) The Scholarship of H. K. Kariyappa, Sr. A. (D.C. Student) was drawn and paid for 8 months since his shortage of attendance was condoned by the University.

(*e*) The reason for not disbursing the amount is unsatisfactory attendance and progress.